**ಸಿ.ಸಿ ಸಂಖ್ಯೆ:** 3060/2021 **ಪಿ ಡಬ್ಲ್ಯೂ: 1**

ದಿಃ 06-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ** ಆರೋಪಿತನ ಪರ ಶ್ರೀ ಜೆ ಆರ್ ವಕೀಲರಿಂದಃ

ನಾನು ಶಾಲಾ ಬಸ್ಸಿನ ಚಾಲಕನಾಗಿ ಕಳೆದ 15 ವರ್ಷಗಳಿಂದ ಲಿಟ್ಲ್ ರಾಕ್ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಸದರಿ ವೃತ್ತಿಯನ್ನು ಹೊರತುಪಡಿಸಿ ಕೃಷಿ ಮೂಲದಿಂದ ಸಹಾ ಆದಾಯ ಪಡೆಯುತ್ತಿದ್ದೇನೆ. ನಾನು ಒಟ್ಟಾರೆಯಾಗಿ ವಾರ್ಷಿಕವಾಗಿ 3-4 ಲಕ್ಷ ಆದಾಯ ಪಡೆಯುತ್ತಿದ್ದೇನೆ. ನಾನು ಆದಾಯ ತೆರಿಗೆ ಪಾವತಿದಾರನಾಗಿಲ್ಲ. ಆರೋಪಿಯು ನನಗೆ ಕಳೆದ 15 ವರ್ಷಗಳಿಂದ ಪರಿಚಯ ಇರುತ್ತಾರೆ. ಈ ದೂರಿನಲ್ಲಿ ನಾನು ತಿಳಿಸಿರುವ ದಿವಾಕರ ಸಹಾ ನನಗೆ ಕಳೆದ 15-20 ವರ್ಷಗಳಿಂದ ಪರಿಚಯ ಇರುತ್ತಾರೆ. ದಿವಾಕರರವರು ನನ್ನ ಸಂಬಂಧಿಕರಾಗಿರುವುದಿಲ್ಲ. ಆರೋಪಿಯು ದಿವಾಕರರವರಿಗೆ ಯಾವ ರೀತಿಯಲ್ಲಿ 50 ಸಾವಿರ ಹಣ ನೀಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

ದಿಃ 11-08-2018 ರಂದು ಆರೋಪಿಗೆ ನಾನು 1,50,000/- ಹಣ ನೀಡಿರುತ್ತೇನೆ. ಸದರಿ ಹಣವನ್ನು ನಾನು ಆರೋಪಿಗೆ ನಗದು ರೂಪದಲ್ಲಿಯೇ ನೀಡಿರುತ್ತೇನೆ. ನಾನು ಒಂದು ತಿಂಗಳಿಗೆ ಅಂದಾಜು 35-40 ಸಾವಿರ ಹಣ ಸಂಪಾದನೆ ಮಾಡುತ್ತೇನೆ.

ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ. ಸರಿ ಇದೆ.

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ. ಎಫ್. ಸಿ., ಉಡುಪಿ.
(ಸಂಚಾರಿ ಪೀಠ ಬ್ರಹ್ಮಾವರ)